# ಈ 'ಬೇಬಿ ಸಿಟ್ಟರ್' ಬೇಡ ಕಣ್ರೀ..!



**'ನಮ್ಮ ಪಾಪೂಗೆ ಇನ್ನೂ ಎರಡು ವರ್ಷ ತುಂಬಿಲ್ಲಾರೀ, ಎಷ್ಟು ಜಾಣ ಅಂತೀರಾ! ಆಗ್ಲೇ ಮೊಬೈಲ್ ಮತ್ತು ಐಪಾಡ್ ಟಚ್ ಸ್ಕ್ರೀನ್ ಎಲ್ಲಾ ಸರ ಸರ ಒತ್ತಿ ಏನೇನೋ ನೋಡ್ತಾನೆ..!'**

**■ ಡಾ. ಕೆ.ಎಸ್. ಚೈತ್ರಾ**

ಬೆಳಿಗ್ಗೆಯಿಂದ ಆಫೀಸಿನಲ್ಲಿ ದುಡಿದು ಬಂದ ಅಮ್ಮನಿಗೆ ಸುಸ್ತು. ಮಗು ನೋಡಿಕೊಳ್ಳಲು ಬರುವ ಸಹಾಯಕಿಯ ಡ್ಯೂಟಿ ಸಂಜೆಗೆ ಮುಗಿಯಿತು. ಸಿಂಕಿನಲ್ಲಿ ಪಾತ್ರೆ ರಾಶಿ ಬಿದ್ದಿದೆ, ಬಟ್ಟೆ ಮಡಚಿ ಇಡಬೇಕು, ಅಪ್ಪ ಮನೆಗೆ ಬರುವಷ್ಟರಲ್ಲಿ ಬಿಸಿ ಅಡಿಗೆ ತಯಾರಾಗಬೇಕು. ಪುಟ್ಟ ಹೆಜ್ಜೆ ಇಟ್ಟು ಕಾಲು ಕಾಲಿಗೆ ಸಿಗುವ ಒಂದೂವರೆ ವರ್ಷದ ಮಗುವನ್ನು ಸಂಬಾಳಿಸುತ್ತಾ ಇವೆಲ್ಲಾ ಮಾಡಲು ಸಾಧ್ಯವೇ? ಮಗುವಿಗೆ ಹಾಲಿನ ಬಾಟಲಿ ಕೊಟ್ಟು ಸೋಫಾ ಮುಂದೆ ಕೂರಿಸಿ ಟಿ.ವಿ ಹಾಕಿ ಬಿಟ್ಟರೆ ಆಯಿತು. ಯಾವುದೋ ಕಾರ್ಟೂನ್ ನೋಡುತ್ತಾ ಮಾತಿಲ್ಲ, ಕತೆಯಿಲ್ಲ: ಕುಳಿತಲ್ಲಿಂದ ಅಲ್ಲಾಡದೇ ಹಾಗೇ ಇರುತ್ತೆ ಮಗು. ಒಂದಷ್ಟು ನಿರಾಳವಾಗಿ ಬೇಗ ಕೆಲಸ ಮುಗಿಸಬಹುದು!

'ನಮ್ಮ ಪಾಪೂಗೆ ಇನ್ನೂ ಎರಡು ವರ್ಷ ತುಂಬಿಲ್ಲಾರೀ, ಎಷ್ಟು ಜಾಣ ಅಂತೀರಾ! ಆಗ್ಲೇ ಮೊಬೈಲ್ ಮತ್ತು ಐಪಾಡ್ ಟಚ್ ಸ್ಕ್ರೀನ್ ಎಲ್ಲಾ ಸರ ಸರ ಒತ್ತಿ ಏನೇನೋ ನೋಡ್ತಾನೆ. ಬೇರೇನೂ ಬೇಡ, ಮೊಬೈಲ್ ಕೊಟ್ಬಿಟ್ರೆ ಸಾಕು. ದೇವರಂಥಾ ಮಗು, ಗಲಾಟೆ– ಅಳು ಯಾವುದೂ ಇಲ್ಲ. ಅಕ್ಕ ಪಕ್ಕದವರಿಗೆ ನಮ್ಮನೇಲಿ ಮಗು ಇದೆ ಅಂತಾನೇ ಗೊತ್ತಾಗಲ್ಲ! ಕೆಲವು ಸಲವಂತೂ ಹಾಗೇ ನಿದ್ದೇನೂ  ಮಾಡಿಬಿಡ್ತಾನೆ!'

ಮನೆಯಲ್ಲಿ ಅಜ್ಜ –ಅಜ್ಜಿ ಮಕ್ಕಳಿಗೆ ಕತೆ ಹೇಳಿ, ಗಿಲಕಿ ಆಡಿಸಿ ಮುದ್ದು ಮಾಡುವ ದೃಶ್ಯಗಳು ಇಂದು ಅಪರೂಪ. ಗಿಲಕಿಗಳು ಓಲ್ಡ್ ಫ್ಯಾಷನ್ ಆದರೆ, ಅಜ್ಜ ಅಜ್ಜಿ ವರ್ಷಕ್ಕೊಮ್ಮೆ ಬರುವ ನೆಂಟರು. ಕಾಲ ಬದಲಾಗಿದೆ, ಅದರೊಂದಿಗೆ ನಮ್ಮ ಜೀವನಶೈಲಿಯೂ! ಮನೆಗೊಂದು ಮಗು ಎನ್ನುವ ಈ ಕಾಲದಲ್ಲಿ ಅಪ್ಪ– ಅಮ್ಮ– ಮಗು ಮೂವರೂ ಒಟ್ಟಿಗಿದ್ದರೆ ಅವಿಭಕ್ತ ಕುಟುಂಬ ಎನ್ನುವ ಮಟ್ಟಿಗೆ ನಾವು ಬದಲಾಗಿದ್ದೇವೆ. ಅಂತಹ ಸಂದರ್ಭದಲ್ಲಿ ಮಕ್ಕಳ ಉಸ್ತುವಾರಿ ಕಷ್ಟವೇ. ಅದಕ್ಕೆ ಪೋಷಕರು ಕಂಡುಕೊಂಡ ಉಪಾಯ, ಟಿವಿ, ಮೊಬೈಲ್, ಐಪಾಡ್‌ಗಳನ್ನು ನೀಡಿ ಮಗುವನ್ನು ಸುಮ್ಮನಾಗಿಸುವುದು, ಅಂದರೆ ಒಂದು ರೀತಿಯಲ್ಲಿ ಈ ಸಾಧನಗಳು ಮಗು ನೋಡಿಕೊಳ್ಳುವ ಬೇಬಿಸಿಟ್ಟರ್‌ಗಳಿದ್ದಂತೆ!

'ನಮ್ಮ ಮಗುವಿಗೆ ಇದನ್ನೆಲ್ಲಾ ನೋಡೋದು ತುಂಬಾ ಇಷ್ಟ. ಇವೆಲ್ಲಾ ಮನೇಲೇ ಇರೋದ್ರಿಂದ ನಮಗೆ ಖರ್ಚೂ ಇಲ್ಲ, ಯಾರೋ ಏನು ಮಾಡಿದರೆ ಎಂಬ ಹೆದರಿಕೆಯೂ ಇಲ್ಲ. ಜೊತೆಗೆ ಟೆಕ್ನಾಲಜಿನೂ ಸಣ್ಣಂದಿನಿಂದಲೇ ಗೊತ್ತಾಗುತ್ತೆ. ಒಳ್ಳೆಯದೇ ಅಲ್ಲವೇ?' ಎಂಬುದು ನಗರದ ಬಹುಪಾಲು ವಿದ್ಯಾವಂತ ಪೋಷಕರ ನುಡಿ.

ಆದರೆ ವೈದ್ಯರು ಮತ್ತು ವಿಜ್ಞಾನಿಗಳು ಈ ರೀತಿಯ ಸತತ ವೀಕ್ಷಣೆಯಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಕೆಡುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಮೆದುಳು ಅತ್ಯಂತ ವೇಗವಾಗಿ ಬೆಳೆಯುವ –ಕಲಿಯುವ, ಹುಟ್ಟಿನಿಂದ ಎರಡು ವರ್ಷದ ಹಂತ ಮಕ್ಕಳಲ್ಲಿ ಮಹತ್ವದ್ದು. ಈ ಸಾಧನಗಳ ಪ್ರಖರ ಬೆಳಕು, ಬಣ್ಣ, ಚಲಿಸುವ ಚಿತ್ರಗಳನ್ನು ಮಕ್ಕಳು ಕಣ್ಣು ಮಿಟುಕಿಸದೇ ನೋಡುವುದು ನಿಜವೇ. ಆದರೆ ಮಗುವಿನ ಮೆದುಳಿಗೆ ಒಂದೂವರೆ ವರ್ಷವಾಗುವ ತನಕ ಆ ಚಿತ್ರಗಳು ಏನು– ಏಕೆ ಎಂದು ಅರ್ಥವಾಗುವ ಸಾಮರ್ಥ್ಯ ಇರುವುದಿಲ್ಲ.

ಸುತ್ತಲಿರುವ ಜನರ ಒಡನಾಟ, ಅವರ ನಡೆ–ನುಡಿ ಮಗುವಿನ ವ್ಯಕ್ತಿತ್ವಕ್ಕೆ ಅಡಿಪಾಯ. ವಸ್ತುಗಳನ್ನು ಮುಟ್ಟಿ, ಎಸೆದು, ಸದ್ದುಗಳನ್ನು ಕೇಳಿ ಅನುಕರಿಸಿ ಮಗು ಕಲಿಯುತ್ತದೆ. ತನ್ನ ಪ್ರೀತಿಯ ತಂದೆ ತಾಯಿಯರ ಮುಖ ನೋಡುತ್ತಾ, ದನಿ ಕೇಳುತ್ತಾ , ಭಾವನೆಗಳನ್ನು ಗುರುತಿಸುತ್ತಾ ಮಗುವಿನ ಮನಸ್ಸು ವಿಕಾಸಗೊಳ್ಳಬೇಕು. ಸುಮ್ಮನೇ ಟಿ.ವಿಯನ್ನು ದಿಟ್ಟಿಸಿ ನೋಡುವುದರಿಂದ ಸಂವಹನಕ್ಕೆ ಅವಕಾಶವಿಲ್ಲ. ತಮ್ಮ ಕೆಲಸ ಮಾಡುತ್ತಾ ಪೋಷಕರು ವ್ಯಸ್ತರಾದರೆ ಇಲ್ಲಿ ಸೋಫಾದಲ್ಲಿ ಮಗು ಉತ್ಸವ ಮೂರ್ತಿಯಾಗಿ ಪ್ರತಿಷ್ಠಾಪನೆಯಾಗುತ್ತದೆ. ಮಾತು ಕಿವಿಗೆ ಬೀಳದೇ ಭಾಷೆ ಕಲಿಯುವುದು ಹೇಗೆ? ಪರಸ್ಪರ ಮುಖ ಕಾಣದೇ